**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ .ನಂಃ 169/ 2023**

**ಚಾಸಾ-1, ಪ್ರಾಸಾ-1**

| | | |
|---|---|---|
| ಸಾಕ್ಷಿದಾರರ ಹೆಸರು | : | ಹೊನ್ನೇಗೌಡ |
| ತಂದೆಯ ಹೆಸರು | : | ಮಂಜೇಗೌಡ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಬಿಟ್ಟಗೌಡನಹಳ್ಳಿ ಗ್ರಾಮ. |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 25.07.2026**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಮಗ. ಚಾಸಾ-3 ರಿಂದ 5 ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳು ನಮ್ಮ ಊರಿನವರು, ಅವರು ಗೊತ್ತು.

2. ಆರೋಪಿಗಳು ನನ್ನ ಮಗನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಹಾಗೂ ಆರೋಪಿತರು ಮಾಡಿದ ಹಲ್ಲೆಯಿಂದಾಗಿ ನನ್ನ ಮಗ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಆರೋಪಿಗಳು ನನ್ನ ಮಗನ ಮೇಲೆ ಹಲ್ಲೆ ಮಾಡಿರುವುದಾಗಿ ನಾನು ಯಾವುದೇ ದೂರು ನೀಡಿಲ್ಲ. ನನಗೆ ಈಗ ತೋರಿದ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ದೂರು ಇದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನಗೆ ಈಗ ತೋರಿಸಿದ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಸ್ಥಳ ಮಹಜರ ಇದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನನಗೆ ಈಗ ತೋರಿಸಿದ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಅಮಾನತು ಮಹಜರ ಇದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಮೇಲ್ಕಂಡ ಸಹಿಗಳನ್ನು ಹಾಸನ ನಗರ ಪೋಲಿಸ ಠಾಣೆಯಲ್ಲಿ 2-3 ವರ್ಷಗಳ ಹಿಂದೆ ಪೋಲಿಸರು ಸಹಿ ಮಾಡುವಂತೆ ತಿಳಿಸಿದ ಮೇರೆಗೆ ಮಾಡಿದ್ದೇನೆ. ಸದರಿ ದಾಖಲೆಗಳಲ್ಲಿ ಬರೆದಿರುವ ವಿಷಯಗಳ ಬಗ್ಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ. ನನಗೆ ಈಗ ತೋರಿಸಿದ ಪೋಟೋಗಳಲ್ಲಿ ನನ್ನ ಭಾವಚಿತ್ರವಿದೆ. ಅವುಗಳನ್ನು ಪೋಲಿಸ ಠಾಣೆಯಲ್ಲಿ

ತೆಗೆದಿದ್ದಾರೆ. ಸದರಿ ಪೋಟೋಗಳನ್ನು ನಿಪಿ-4, 5 ಮತ್ತು 6 ಎಂದು ಗುರುತಿಸಲಾಯಿತು. ಸದರಿ ಪೋಟೋಗಳಿಗೆ ಸಂಬಂದಿಸಿದ ಸಿಡಿ ಯನ್ನು ನಿಪಿ-7 ಎಂದು ಗುರುತಿಸಲಾಯಿತು. ನನ್ನ ಮಗನ ಮೇಲೆ ನಡೆಯಿತು ಎನ್ನಲಾದ ಹಲ್ಲೆಯ ಬಗ್ಗೆ ನಾನು ಯಾವುದೇ ಮರು ಹೇಳಿಕೆಯನ್ನು ನೀಡಿಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

<u>**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**</u>

3. ದಿಃ 11.02.2023 ರಂದು ನಾನು ನಿಪಿ-1 ರಂತೆ ದೂರು ದಾಖಲಿಸಿ ಸದರಿ ದೂರಿನಲ್ಲಿ ಚಾಸಾ-3 ರವರು ರಾತ್ರಿ 08.00 ಗಂಟೆಗೆ ನನಗೆ ಕರೆ ಮಾಡಿ ನನ್ನ ಮಗನ ಮೇಲೆ ನ್ಯಾಯಾಲಯದ ಮುಂದಿರುವ ಆರೋಪಿಗಳು KCP ವೈನ್ ಅಂಗಡಿಯ ಮುಂದೆ ಗಲಾಟೆ ಮಾಡಿ ಹೊಡೆದಿರುವುದಾಗಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ದಿಃ 10.02.2023 ರಂದು ವಿಚಾರ ತಿಳಿದು ನಾನು ಸ್ಥಳಕ್ಕೆ ಬಂದಾಗ ನನ್ನ ಮಗ ಅಲ್ಲಿ ಇಲ್ಲದ ಕಾರಣ ಅಲ್ಲಿ ನರೆದಿದ್ದ ಜನ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದ ಮೇರೆಗೆ ನಾನು ತಕ್ಷಣ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಲಾಗಿ ನನ್ನ ಮಗನ ತಲಗೆ, ಮುಖಕ್ಕೆ ಎಡಭುಜಕ್ಕೆ ಪೆಟ್ಟು ಬಿದ್ದು ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ಸರಿ. ಸರ್ಕಾರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಮಂಗಳಾ ಆಸ್ಪತ್ರೆಗೆ ದಾಖಲಿಸಿದ್ದೆನು ಎಂದರೆ ಸರಿ. ಮಂಗಳಾ ಆಸ್ಪತ್ರೆಯಲ್ಲಿ ನನ್ನ ಮಗನನ್ನು ವಿಚಾರಿಸಲಾಗಿ ಆರೋಪಿಗಳು ಆತನ ಮೇಲೆ ಹಲ್ಲೆ ಮಾಡಿರುವ ವಿಷಯ ತಿಳಿಸಿದನು ಎಂದರೆ ಸರಿಯಲ್ಲ. 1 ನೇ ಆರೋಪಿ ಖಾಲಿ ಬೀರು ಬಾಟಲಿಯಿಂದ ನನ್ನ ಮಗನ ಮೇಲೆ ಹಲ್ಲೆ ಮಾಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಬೆಲ್ಟಿನಿಂದ ನನ್ನ ಮಗನ ಮೇಲೆ ಹಲ್ಲೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅಲ್ಲಿ ಚಾಸಾ-3 ರವರು ಜಗಳ ಬಿಡಿಸಿ ಸಮಾದಾನ ಪಡಿಸಿದರು ಎಂದರೆ ಸರಿಯಲ್ಲ. ಆ ರೀತಿ ಹಲ್ಲೆ ಮಾಡಿದ ನಂತರ ಆರೋಪಿಗಳೇ ನನ್ನ ಮಗನನ್ನು ಆಸ್ಪತ್ರೆಯವರೆಗೆ ಬಿಟ್ಟು ಹೋಗಿದ್ದಾರೆ ಎಂದರೆ ಸರಿಯಲ್ಲ. ಮೇಲ್ಕಂಡ ಎಲ್ಲಾ ವಿಷಯಗಳು ತಿಳಿದ ನಂತರ ದಿಃ 11.02.2023 ರಂದು ನಿಪಿ-1 ರಂತೆ ದೂರು ದಾಖಲಿಸಿದ್ದೇನೆ ಎಂದರೆ

ಸರಿಯಲ್ಲ.

**4.** ದಿಃ 12.02.2023 ರಂದು ಪೋಲಿಸರು ಸ್ಥಳಕ್ಕೆ ಬೇಟಿ ನೀಡಿದಾಗ ನಾನೇ ಸ್ಥಳ ತೋರಿಸಿದ ಮೇರೆಗೆ ನಿಪಿ-2 ರಂತೆ ನನ್ನ ಸಮಕ್ಷಮ ಮಹಜರ ಕ್ರಮ ಜರುಗಿಸಿ ನಾನೇ ಹಾಜರುಪಡಿಸಿದ ಮೇರೆಗೆ ಹೊಡೆದಿರು ಕಿಂಗ್ ಪಿಶರ್ ಬಿಯರ್ ಬಾಟಲಿನ ಚೂರುಗಳು ಮತ್ತು ಕಪ್ಪು ಬಣ್ಣದ ಬೆಲ್ಟನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ.

(ಈ ಸಮಯದಲ್ಲಿ ಸೀಲುಮಾಡಲಾಗಿರುವ ಈ ಕೇಸಿನ ಮುದ್ದೆಮಾಲಿನ ಪ್ರತ್ಯೇಕ ಗಂಟನ್ನು, ಅದರ ಮೇಲಿರುವ ಸೀಲು ಸರಿ ಇದೆ ಎನ್ನುವುದನ್ನು ದೃಢಪಡಿಸಿಕೊಂಡು, ಎದುರುದಾರರ ವಕೀಲರ ಸಮಕ್ಷಮ ನ್ಯಾಯಾಲಯದ ಅನುಮತಿಯ ಮೇರೆಗೆ, ಬಿಚ್ಚಿ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ)

**5.** ಸಾಕ್ಷಿಯು ವಸ್ತುಗಳ ಅಮಾನತನ್ನು ನಿರಾಕರಿಸಿದ್ದರೂ ಸಹ ಕೇವಲ ವಸ್ತುಗಳನ್ನು ಸಾಕ್ಷಿಗೆ ತೋರಿಸಿದ ಕಾರಣಕ್ಕಾಗಿ ಮತ್ತು ಗುರುತಿನ ಸಲುವಾಗಿ ಒಂದು ಕಪ್ಪು ಬಣ್ಣದ ಬೆಲ್ಟನ್ನು ಮು.ಮಾ 1 ಎಂದು, ಬಿಯರ್ ಬಾಟಲಿಯ ಚೂರುಗಳನ್ನು ಒಟ್ಟಾಗಿ ಮು.ಮಾ 2 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ-5 ರಂತೆ ಪೋಟೋ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಅದೇ ದಿನ ನಾನೇ ಪೋಲಿಸ ಠಾಣೆಗೆ ಹಾಜರಾಗಿ ನನಗೆ ಈಗ ತೋರಿಸಿದ ನನ್ನ ಮಗನಿಗೆ ಸೇರಿದ ಬಟ್ಟೆಗಳನ್ನು ಹಾಜರುಪಡಿಸಿದ ಮೇರೆಗೆ ನಿಪಿ-3 ರಂತೆ ನನ್ನ ಸಮಕ್ಷಮ ಚಾಸಾ-4 ಮತ್ತು 5 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ.

(ಈ ಸಮಯದಲ್ಲಿ ಸೀಲುಮಾಡಲಾಗಿರುವ ಈ ಕೇಸಿನ ಮುದ್ದೆಮಾಲಿನ ಪ್ರತ್ಯೇಕ ಗಂಟನ್ನು, ಅದರ ಮೇಲಿರುವ ಸೀಲು ಸರಿ ಇದೆ ಎನ್ನುವುದನ್ನು ದೃಢಪಡಿಸಿಕೊಂಡು, ಎದುರುದಾರರ ವಕೀಲರ ಸಮಕ್ಷಮ ನ್ಯಾಯಾಲಯದ ಅನುಮತಿಯ ಮೇರೆಗೆ, ಬಿಚ್ಚಿ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ)

**6.** ನನಗೆ ಈಗ ತೋರಿಸಿದ ಬಟ್ಟೆಗಳು ನನ್ನ ಮಗನಿಗೆ ಸೇರಿದ್ದವು ಎಂದರೆ ಸರಿ. ಅವುಗಳನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿ. ಒಂದು ಡಿಸ್ಟಂಪರ್ ಬಣ್ಣದ ಟೀ ಶರ್ಟನ್ನು ಮು.ಮಾ 3 ಎಂದು, ನೀಲಿ ಬಣ್ಣದ ಪ್ಯಾಂಟನ್ನು ಮು.ಮಾ 4 ಎಂದು ಗುರುತಿಸಲಾಯಿತು. ಆ ರೀತಿ ಅಮಾನತುಪಡಿಸಿಕೊಳ್ಳುವ ಸಮಯದಲ್ಲಿ ನಿಪಿ-4 ರಂತೆ ಪೋಟೋ ತೆಗೆಯಲಾಗಿದೆ ಎಂದರೆ ಸರಿ.

**7.** ದಿಃ 11.02.2023 ರಂದು ನನಗೆ ಈಗ ಓದಿ ಹೇಳಿದಂತೆ ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ನಾನು ನನ್ನ ಮಗನ ಮೇಲೆ ಆರೋಪಿಗಳು ನಡೆಸಿದ ಹಲ್ಲೆಯ ಬಗ್ಗೆ ನಿಪಿ-1 ರಂತೆ ದೂರು ದಾಖಲಿಸಿ

ಮಹಜರ ಸಮಯದಲ್ಲಿ ಹಾಜರಿದ್ದು, ಸದರಿ ಮಹಜರಗಳಲ್ಲಿ ಬರೆದಿರುವ ವಿಷಯಗಳನ್ನು ತಿಳಿದು ಸಹಿ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಕಾರಣದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: ಆರೋಪಿತರ ಪರ ವಕೀಲರಿಂದ:**

ಆರೋಪಿಗಳ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.